ಪಂಪ್ಸೆಟ್ಗಳಿಗೆ ಕನಿಷ್ಟ ಪ್ರತಿದಿನ 16 ಗಂಟೆಯಾದರೂ ನಿರಂತರ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಜೆ.ಎಚ್. ಪಟೇಲ್ (ಇಂಧನ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಗದಗ-ಬೆಟಗೇರಿ ಅವಳಿ ನಗರಕ್ಕೆ ಕೊರ್ಲ ಹಳ್ಳಿಯಲ್ಲಿರುವ ಪಂಪಿಂಗ್ ಸ್ಟೇಷನ್ನಿಂದ ನೀರು ಸರಬರಾಜಾಗುತ್ತಿದೆ. ಈ ಪಂಪಿಂಗ್ ಸ್ಟೇಷನ್ಗೆ ಈ ಹಿಂದೆ ಕನಿಷ್ಠ 10.5 ಕೆವಿ ವೋಲ್ಟೇಜ್ನಲ್ಲಿ ವಿದ್ಯುತ್ನ್ನು ಸರಬರಾಜು ಮಾಡಬೇಕಿತ್ತು. ಆದರೆ, ಈಗ ಇದಕ್ಕಿಂತಲೂ ಕಡಿಮೆ ವೋಲ್ಟೇಜ್ನಲ್ಲಿ ಪಂಪುಗಳು ಕಾರ್ಯ ನಿರ್ವಹಿಸುವಂತೆ ಅಗತ್ಯ ಮಾರ್ಪಾಟುಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಎನ್ಜಿಇಎಫ್ ಸಂಸ್ಥೆ ಮೂಲಕ ಮಾಡಿಸಿರುತ್ತಾರೆ. ಈ ವೋಲ್ಟೇಜ್ನಲ್ಲಿ ದಿನವಹಿ 18 ಗಂಟೆಗಳ ಅವಧಿಗೆ ವಿದ್ಯುತ್ ಪೂರೈಕೆ ಮಾಡಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಮಾರ್ಚ್ 95ರ ತಿಂಗಳಿನಲ್ಲಿ 5 ದಿನಗಳನ್ನು ಹೊರತುಪಡಿಸಿ, ಉಳಿದ ದಿನಗಳಲ್ಲಿ ಅಗತ್ಯವಿರುವ ವೋಲ್ಟೇಜ್ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗಿದೆ. ರಾಜ್ಯಾದ್ಯಂತ ಉಂಟಾದ ವಿದ್ಯುತ್ ವ್ಯವಸ್ಥೆ ಕುಸಿತದಿಂದಾಗಿ ಮಾರ್ಚ್ 14 ರಿಂದ 19ರ ಅವಧಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿತ್ತು. ಅಲ್ಲದೇ ಕೆಲವು ದಿನಗಳು ಪೈಪ್ ಲೈನಿನಲ್ಲಿ ಉಂಟಾದ ದೋಷದಿಂದಾಗಿ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯು ನೀರನ್ನು ಪಂಪು ಮಾಡುವ ಕೆಲಸವನ್ನು ಸ್ಥಗಿತಗೊಳಿಸಿತ್ತು. ಈಗ ಅಗತ್ಯವಿರುವ ವೋಲ್ಟೇಜ್ನಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿರುವುದರಿಂದ ನೀರನ್ನು ಪಂಪು ಮಾಡಲು ತೊಂದರೆ ಇರುವುದಿಲ್ಲ. ಅಲ್ಲದೇ, ಕೊರ್ಲಹಳ್ಳಿಯಲ್ಲಿರುವ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ಪಂಪಿಂಗ್ ಸ್ಟೇಷನ್ಗೆ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ, ಮಂಡಳಿಯು ಒಂದು 11 ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸ್ಫಾರ್ಮರ್ ಉಳ್ಳ 33:11 ಕೆವಿ ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡುತ್ತಿದ್ದು, ಈ ವಿದ್ಯುತ್ ಉಪಕೇಂದ್ರದಿಂದ ಸದರೀ ಪಂಪಿಂಗ್ ಸ್ಟೇಷನ್ಗೆ ವಿದ್ಯುತ್ ಸರಬರಾಜನ್ನು ಮಾಡಲಾಗುವುದು. ಇದರಿಂದಾಗಿ ವೋಲ್ಟೇಜ್ ಪರಿಸ್ಥಿತಿ ಸುಧಾರಣೆಗೊಳ್ಳುತ್ತದೆ.

ರಾಷ್ಟ್ರೀಯ ಕ್ರೀಡೆಯ ಹಿನ್ನೆಲೆಯಲ್ಲಿ ಕನ್ನಡ ಬಾಲಕಿಯ ಪ್ರತಿಭೆಯನ್ನು ಗುರುತಿಸಿ ಸೂಕ್ತ ತರಬೇತಿ ನೀಡುವ ಬಗ್ಗೆ

ಶ್ರೀ ಎಸ್. ಸುರೇಶ್ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, 11 ವರ್ಷದ ಬಾಲಕಿ ಕಳೆದ ಮೂರು ವರ್ಷಗಳಲ್ಲಿ 51 ಪದಕಗಳನ್ನು ಗೆದ್ದಿದ್ದಾಳೆ. ಅದರಲ್ಲಿ 24 ಸ್ವರ್ಣ ಪದಕಗಳು ಇವೆ. ಪ್ರತಿದಿನ 14 ಕಿಲೋಮೀಟರ್ ಸ್ವಿಮ್ ಮಾಡಿ ತನ್ನ ಬಾಲ್ಯವನ್ನೇ ಸ್ಯಾಕ್ರಿಫೈಸ್ ಮಾಡಿದೆ. ಇವತ್ತು ಆ ಹುಡುಗಿ ಆಡಳಿತ ಮಂಡಳಿಯ ಅವಕೃಪೆಗೆ ಗುರಿಯಾಗಿದ್ದಾಳೆ. 11 ವರ್ಷದ ಎಳೆ ಬಾಲೆಯ ಮೇಲೆ ಅಘಾತವಾಗುವ ರೀತಿಯಲ್ಲಿ ಆ ಆಡಳಿತ ಮಂಡಳಿಯವರು ನಡೆದುಕೊಳ್ಳುತ್ತಿದ್ದಾರೆ. ಜನವರಿ ತಿಂಗಳಲ್ಲಿ ನಡೆಯುವ ರಾಷ್ಟ್ರೀಯ ಕ್ರೀಡೆಯ ಹಿನ್ನೆಲೆಯಲ್ಲಿ ಕರ್ನಾಟಕಕ್ಕೆ ಹೆಮ್ಮೆ ತರುವ ಈ ಬಾಲೆಯ ಪ್ರತಿಭೆಯನ್ನು ಗುರುತಿಸಿ ಆ ಪ್ರತಿಭೆಗೆ ಸೂಕ್ತ ರೀತಿಯಲ್ಲಿ ತರಬೇತಿಯನ್ನು ಮುಂದುವರಿಸಬೇಕೆಂದು ಆಡಳಿತ ಮಂಡಳಿಯವರಿಗೆ ಸರ್ಕಾರ ಸೂಚನೆ ನೀಡಿ ಯಾವುದೇ ವಿಧದಲ್ಲಿ ಆ ಬಾಲೆಗೆ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ ; ಮಾನ್ಯ ಅಧ್ಯಕ್ಷರೆ,

ಉಪಾಧ್ಯಕ್ಷರು : ನಿಯಮ 351ರ ಕೆಳಗೆ ಬೇರೆಯವರು ಮಾತನಾಡುವ ಹಾಗಿಲ್ಲ. ಸರ್ಕಾರದವರು ಉತ್ತರ ಕೊಡುತ್ತಾರೆ ಅಷ್ಟೇ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಸೈನ್ ಹಾಕಿದ್ದೇನೆ ಹಾಗೂ ಇದು ಒಂದು ಹೆಣ್ಣು ಮಗುವಿಗೆ ಸಂಬಂಧಪಟ್ಟ ವಿಚಾರ. ಹೆಣ್ಣು ಮಗು ವಿಚಾರ ಬಂದಾಗ ನಾನು ಮಾತನಾಡಬಾರದು ಎಂದರೆ ಹೇಗೆ? ಈಜುಕೊಳ ಇರುವುದು ಯಾರಿಗೋಸ್ಕರ?

ಶ್ರೀ ಜೆ.ಹೆಚ್. ಪಟೇಲ್ : ನಿಯಮ 351ರ ಕಳಿಗೆ ಬೇರೆಯವರು ಮಾತನಾಡುವುದಕ್ಕೆ ಬರುವುದಿಲ್ಲ. ಬೇಕಾದರೆ ಬೇರೆ ರೂಪದಲ್ಲಿ ಈ ವಿಷಯವನ್ನು ತಾವು ಪುನ: ತರಬಹುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಬರದೇ ಇದ್ದರೂ ಕೂಡ ಎಕ್ಸಕಷನ್ ಜ್ಯೂರಿ ಎಂದು ಒಂದು ಲಾ ಇದೆ. ಅಂದರೆ, ಎಲ್ಲಾ ಪ್ರೊಸೀಜರ್‌ಗಳನ್ನು ಮಾಡಬಹುದು ಎನ್ನತಕ್ಕಂಥಾದ್ದು ರೋಮನ್ ಲಾ ಪ್ರಿನ್ಸಿಪಲ್. ಆದ್ದರಿಂದ, ಮಾನ್ಯ ಉಪಾಧ್ಯಕ್ಷರೆ, ಅದರ ಬಗ್ಗೆ ಮಾತನಾಡಲುಸ ನಮ್ಮ ಅನುಮತಿಯನ್ನು ಬೇಡುತ್ತಿದ್ದೇನೆ. ಇಲ್ಲಿ ಏನಾಗಿದೆ ಎಂದರೆ, ಒಂದು ಈಜು ಕೊಳವನ್ನು ಕಾರ್ಪೋರೇಷನ್‌ನವರು ಲೀಸ್ ಕೊಟ್ಟಿಬಿಟ್ಟಿದ್ದಾರೆ. ನಾನು ಕೇಳುತ್ತಿವುದು ಇಷ್ಟೇ ಅವರು ಕೊಟ್ಟಿರುವಂಥ ಲೀಸನ್ನು ವಾಪಸ್ ತೆಗೆದುಕೊಳ್ಳಬೇಕು. ಆ ಹೆಣ್ಣು ಮಗುವಿಗೆ ರಕ್ತ ಬರುವ ಹಾಗೆ ಹೊಡೆದಿದ್ದಾರೆ. ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದಾರೆ, ಇನ್ನೇನು ಈಗಲೋ, ಆಗಲೋ ಪ್ರಾಣ ಹೋಗುವಂಥ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ಕೊಟ್ಟು ಮಗುವನ್ನು ಬದುಕಿಸಿದ್ದಾರೆ. ಇದು ಆಗಿರತಕ್ಕಂಥ ವಿಷಯ. ಅವನನ್ನು ಸಸ್ಪೆಂಡ್ ಮಾಡಿದ್ದೇವೆಂದು ಹೇಳಿದ್ದಾರೆ. ಸಸ್ಪೆಂಡ್ ಮಾಡಿದ್ದೇವೆಂದು ಹೇಳಿದ್ದರೂ ಅದೇ ಈಜು ಕೊಳದಲ್ಲಿ ಅವನ ಭರ್ತಡೇ ಸೆಲಬರೇಟ್ ಮಾಡಿದ್ದಾರೆ.

ಶ್ರೀ ಬಸವರಾಜ ರಾಯ ರೆಡ್ಡಿ : ನಿಯಮವನ್ನೆಲ್ಲಾ ಗಾಳಿಗೆ ತೂರಿದಂತಾಯಿತು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಗಾಳಿಯೂ ಇಲ್ಲ, ತೂರುವುದೂ ಇಲ್ಲ. ಇಂಥಾ ಸಣ್ಣ ಹೆಣ್ಣು ಮಗುವಿಗೆ ಈ ತರದ ಹೊಡೆದಿದ್ದರೆ ಇನ್ನು ಬೇರೆಯವರ ಗತಿ ಏನು? ಈ ಮಗುವಿಗೆ ಕೆಂಗೇರಿಯಲ್ಲಿರುವ ಈಜುಕೊಳದಲ್ಲಿ ತರಬೇತಿ ಕೊಡಿಸುತ್ತೇವೆಂದು ಹೇಳಿದ್ದಾರೆ. ಸಣ್ಣ ಮಗುವಿನ ಮನಸ್ಸಿನ ಮೇಲೆ ಅಘಾರವಾಗುವ ರೀತಿಯಲ್ಲಿ ಅವರು ನಡೆದುಕೊಂಡಿದ್ದಾರೆ. ಇದೇ ಈಜುಕೊಳದಲ್ಲಿ ತರಬೇತಿ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಅವಳು ಪ್ರತಿಭಾವಂತ ವಿದ್ಯಾರ್ಥಿ, ಇವತ್ತು ಅವಳನ್ನು 5 ವರ್ಷದ ಮಕ್ಕಳ ಜೊತೆ ಟ್ರೈನಿಂಗ್‌ಗೆ ಹಾಕಿದ್ದೀರಿ. ಇದರಿಂದ ಅವಳಿಗೆ ಮಾನಸಿಕವಾಗಿ ಆಘಾತವಾಗಿದೆ. ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಕರ್ನಾಟದಕ ಹೆಮ್ಮೆಯ ಹೆಣ್ಣು ಮಗಳು ಆಕೆ. ಅಂದರೆ, ಆ ಆಕ್ಷತಾ ನಮ್ಮ ನಿಮ್ಮ ಎಲ್ಲರ ಹೆಣ್ಮು ಮಗಳಾಗುತ್ತಾಳೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಸುರೇಶ್ ಕುಮಾರ್‌ರವರು, ನಿಯಮ 351ರ ಅಡಿಯಲ್ಲಿ ಎತ್ತಿರತಕ್ಕಂಥ ಸೂಚನೆಗೆ ತಾವು ವಿಶೇಷವಾದ ಅನುಮತಿಯನ್ನು ಮಾನ್ಯ ಸದಸ್ಯೆಯಾಗಿರತಕ್ಕಂಥ ಪ್ರಮೀಳಾರವರಿಗೂ ಕೊಟ್ಟು ಮಾತನಾಡಲು ಅವಕಾಶ ಕೊಟ್ಟಿರುತ್ತೀರಿ. ಸಂತೋಷ. ಇವರು ಹೇಳಿರತಕ್ಕಂಥ ವಿಚಾರದ ನೋವು ನನಗೂ ಅರ್ಥವಾಗುತ್ತದೆ. ವಿಷಯಕ್ಕೆ ಗಂಭೀರತೆ ಇದೆ. ಈ ಘಟನೆ 1994 ಡಿಸೆಂಬರ್ 24 ರಂದು ನಡೆದಿದೆ. ಪೋಲಿಸರಿಂದ ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತಕ್ಷಣ ತೆಗೆದುಕೊಳ್ಳಲಾಗಿದೆ. ಅದರೆ, ಅದರಿಂದ ಪರಿಹಾರ ಸಿಕ್ಕಿಲ್ಲ ಎನ್ನುವುದೂ ಸಹ ನನಗೆ ಗೊತ್ತಿದೆ. ಅಥ್ಲೆಟಿಕ್ ಕ್ಲಬ್‌ನವರನ್ನು ಹಾಗೂ ಆ ಹುಡುಗಿಯ ಪೋಷಕರನ್ನು ಕರೆದು, ಮತ್ತೆ ಅದೇ ಈಜುಕೊಳದಲ್ಲಿ ತರಬೇತಿಯನ್ನು ಪಡೆಯಲಿಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಆಕೆಗೆ ಆಗಿರತಕ್ಕಂಥ ಅಪಘಾತದ ಬಗ್ಗೆ ನನಗೂ ಸಹಿತಾ ನೋವಿದೆ.

ಅದನ್ನು ಬಗೆಹರಿಸಲಿಕ್ಕಾಗಿ ಪೋಲೀಸರ ಮೇಲಾಗಲೀ ಅಥವಾ ಆ ಸಂಸ್ಥೆಯವರ ಮೇಲಾಗಲೀ ಯಾವ ರೀತಿ ಕ್ರಮ ತೆಗೆದುಕೊಳ್ಳಬಹುದು ಎಂಬ ಬಗ್ಗೆ ನ್ಯಾಯಯುತವಾಗಿ ಹಾಗೂ ನಿಷ್ಪಕ್ಷಪಾತವಾಗಿ ನಾನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ್ಕಂಥ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತೇನೆ.

ಶಾಸನ ರಚನೆ

1995ರ ಕರ್ನಾಟಕ ವಿದ್ಯುತ್ ಸರಬರಾಜು ಉದ್ಯಮಗಳ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಜೆ.ಹೆಚ್. ಪಟೀಲ್ : ಉಪ ಮುಖ್ಯಮಂತ್ರಿಗಳು, ವಿದ್ಯುತ್, ಪ್ರವಾಸೋದ್ಯಮ ಸಚಿವರು) : ಮಾನ್ಯ ಅಧ್ಯಕ್ಷರೆ, 1995ರ ಕರ್ನಾಟಕ ವಿದ್ಯುತ್ ಸರಬರಾಜು ಉದ್ಯಮಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, 1995ರ ಕರ್ನಾಟಕ ವಿದ್ಯುತ್ ಸರಬರಾಜು ಉದ್ಯಮಗಳ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಜೆ.ಹೆಚ್. ಪಟೀಲ್ : (ಉಪ ಮುಖ್ಯ ಮಂತ್ರಿಗಳು, ವಿದ್ಯುತ್, ಪ್ರವಾಸೋದ್ಯಮ ಸಚಿವರು) ಮಾನ್ಯ ಅಧ್ಯಕ್ಷರೆ, 1995ರ ಕರ್ನಾಟಕ ವಿದ್ಯುತ್ ಸರಬರಾಜು ಉದ್ಯಮಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : * ವಿಧೇಯಕವನ್ನು ಮಂಡಿಸಲಾಗಿದೆ.

1995ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ. ಪ್ರಕಾಶ್: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, 1996ರ ಕರ್ನಾಟಕ ಪೆಂಚಾಯತ್ ರಾಜ್ ತಿದ್ದುಪಡಿ (ವಿಧೇಯಕವನ್ನು) ಮಂಡಿಸಲು ತಮ್ಮ ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಪಿ. ಪ್ರಕಾಶ್ : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : * ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ, 1995 (ಮಂಗಣಿನ್ ಅನುಮತಿ ಕೋರಿಕೆ)

ಶ್ರೀ ಎಂ,ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಸ್ಥಳೀಯ ಪ್ರಾಧಿರಾಕಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ-1995ನ್ನು ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.